ಉ) ಉಳಿದ ಕುಟುಂಬಗಳಿಗೆ ವಸತಿ ಸೌಕರ್ಯ ಕಲ್ಪಿಸಲು ಸರ್ಕಾರದ ಯೋಜನೆ ಏನು? (ಪ್ರತಿ ನಗರಸಭೆವಾರು ವಿವರವಾದ ಮಾಹಿತಿಯನ್ನು ಒದಗಿಸುವುದು)

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ರಾಜ್ಯದಲ್ಲಿ ಮಂಡಳಿಯ ವತಿಯಿಂದ ಇಲ್ಲಿಯವರೆಗೆ ಗುರ್ತಿಸಿರುವ ಒಟ್ಟು 1871 ಕೊಳಚೆ ಪ್ರದೇಶಗಳಿರುತ್ತವೆ

ಆ) ಈ ಕೊಳಚೆ ಪ್ರದೇಶಗಳಲ್ಲಿ ಸುಮಾರು 3, 18, 463 ಕುಟುಂಬಗಳು ವಾಸಿಸುತ್ತಿರುವುದಾಗಿ ಅಂದಾಜು ಮಾಡಲಾಗಿದೆ.

ಇ) ಮಂಡಳಿಯ 1982-83ನೇ ಸಾಲಿನಲ್ಲಿ 1998ರ ಫೆಬ್ರವರಿ ಅಂತ್ಯದವರೆಗೆ 19827 ವಸತಿ ಗೃಹಗಳನ್ನು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಅರ್ಹ ಫಲಾನುಭವಿಗಳಿಗಾಗಿ ಕಟ್ಟಿಸಲಾಗಿದೆ.

ಈ) ಪ್ರಸಕ್ತ 1997-98ನೇ ಸಾಲಿನಲ್ಲಿ ಒಟ್ಟು 6225 ವಸತಿ ಗೃಹಗಳನ್ನು ರಾಜ್ಯ ವತಿಯಿಂದ ಅನುದಾನದ ಜೊತೆಗೆ ಹುಡ್ಕೋ ಸಂಸ್ಥೆಯ ಸಾಲದ ನೆರವಿನೊಂದಿಗೆ ಪ್ರಾರಂಭಿಸಲು ಯೋಜಿಸಿದೆ ಈ ಪೈಕಿ 2679 ಮನೆಗಳಿಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಅಂದಾಜು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಆಡಳಿತಾತ್ಮಕ ಮಂಜೂರಾತಿಗಾಗಿ ಶೀಘ್ರದಲ್ಲೇ ಸಲ್ಲಿಸಲಿದೆ. ಹಾಗೂ ಉಳಿದ 1777 ಮನೆಗಳಿಗೆ ಸ್ಥಳ ಲಭ್ಯತೆ ಧರಿಸಿ ಮುಂದಿನ ಕ್ರಮ ಕೈಗೊಳ್ಳಬೇಕಾಗಿದೆ.

ಉ) ಮಂಡಳಿಯ ಘೋಷಿತ ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಸ್ಥಳ ಲಭ್ಯತೆ ಹಾಗೂ ಸರ್ಕಾರ ಆಯವ್ಯಯದಲ್ಲಿ ಮಂಡಳಿಗೆ ಒದಗಿಸುವ ಅನುದಾನ ಧರಿಸಿ ಆಯ್ದ ಕೊಳಚೆ ಪ್ರದೇಶಗಳಲ್ಲಿ ಆದ್ಯತೆಯ ಮೇರೆಗೆ ಹುಡ್ಕೋ ಸಂಸ್ಥೆಯ ಸಾಲವು ಸೇರಿದಂತೆ ಹಂತಹಂತವಾಗಿ ಮುಂದಿನ ಕೆಲವಾರು ವರ್ಷಗಳಲ್ಲಿ ವಸತಿ ಗೃಹಗಳನ್ನು ನಿರ್ಮಿಸಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಬೆಳೆ ವಿಮಾ ಯೋಜನೆ

149 (250) ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿ 1996-97ರ ಮುಂಗಾರು ಹಂಗಾಮಿನಲ್ಲಿ ತಾಲ್ಲೂಕುವಾರು ರೈತರಿಗೆ ಯಾವ ಯಾವ ಬೆಳೆಗೆ ಎಷ್ಟು ವಿಮಾ ಪರಿಹಾರ ಕೊಡಲಾಗಿದೆ.

ಆ) ಧಾರವಾಡ ಜಿಲ್ಲೆಯಲ್ಲಿ (ಹಾವೇರಿ, ಗದಗ್ ನೂತನ ಜಿಲ್ಲೆಗಳನ್ನು ಕೂಡಿ) 1997-98ರ ಮುಂಗಾರಿ ಹಂಗಾಮಿನಲ್ಲಿ ಬೆಳೆ ವಿಮೆ ಯೋಜನೆಗೆ ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಬೆಳೆಗೆ ವಿಮಾ ಯೋಜನೆಯ ಲಾಭ ದೊರಕಲಿದೆ. ತಾಲ್ಲೂಕುವಾರು ದೊರಕಲಿರುವ ವಿಮಾ ಹಣ ಎಷ್ಟು ಈಗ ಯಾವ ಹಂತದಲ್ಲಿದೆ.

ಸಿ. ಬೈರೇಗೌಡ, (ಕೃಷಿ ಸಚಿವರು) :

ಅ) 1997-98ರ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳಿಗೆ ಒಳಗೊಳ್ಳುವ ತಾಲ್ಲೂಕುಗಳು ಈ ಕೆಳಕಂಡಂತಿವೆ : (ಹಾವೇರಿ, ಗದಗ ಜಿಲ್ಲೆಗಳು ಸೇರಿ)

ಆ) 1996-97ರ ಮುಂಗಾರು ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರದ ಮಾಹಿತಿಯನ್ನು ಸಾಮಾನ್ಯ ವಿಮಾ ನಿಗಮದವರು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಿದ್ದು, ಕೇಂದ್ರದಿಂದ ಅನುಮೋದನೆ ಬಂದ ಕೂಡಲೇ ನಷ್ಟ ಪರಿಹಾರವನ್ನು ರೈತರಿಗೆ ಕೊಡಲಾಗುವುದು.

ಕ್ರಮ ಸಂಖ್ಯೆ	ಬೆಳೆ		ತಾಲ್ಲೂಕುಗಳು
1)	ನೀರಾವರಿ ಭತ್ತ	:	ಬ್ಯಾಡಗಿ, ಹಾನಗಲ್, ಹಿರೇಕೆರೂರು, ಕಲಘಟಗಿ, ಮತ್ತು ರಾಣಿ ಬೆನ್ನೂರು
2)	ಮಳೆ ಆಶ್ರಿತ ಭತ್ತ	:	ಬ್ಯಾಡಗಿ, ಧಾರವಾಡ, ಹಾನಗಲ್ ಹಿರೇಕೆರೂರ್, ಹುಬ್ಬಳ್ಳಿ, ಕಲಘಟಗಿ, ಶಿಗ್ಗಾವಿ.
3)	ಜೋಳ	:	ಬ್ಯಾಡಗಿ, ಧಾರವಾಡ, ಹಾನಗಲ್ ಹಿರೇಕೆರೂರ್, ಹುಬ್ಬಳ್ಳಿ, ಕಲಘಟಗಿ, ಹಿಗ್ಗಾವಿ, ಗದಗ್, ಹಾವೇರಿ, ಕುಂದಗೋಳ, ಮುಂಡರಗಿ, ರಾಣಿ ಬೆನ್ನೂರ್, ರೋಣ ಮತ್ತು ಸವಣೂರು.
4)	ನೀರಾವರಿ ಮುಸುಕಿನ ಜೋಳ	:	ಬ್ಯಾಡಗಿ, ಹಾವೇರಿ, ರಾಣಿಬೆನ್ನೂರು, ಹಿರೇಕೆರೂರು, ನವಲಗುಂದ್, ರೋಣ ಮತ್ತು ನರಗುಂದ್
5)	ಮಳೆ ಆಶ್ರಿತ ಮುಸುಕಿನ ಜೋಳ	:	ಬ್ಯಾಡಗಿ, ಹಾವೇರಿ ಮತ್ತು ರಾಣಿಬೆನ್ನೂರು
6)	ತೊಗರಿ	:	ಧಾರವಾಡ ಮತ್ತು ಹಿರೇಕೆರೂರು.
7)	ಶೇಂಗಾ	:	ಧಾರವಾಡ, ಹಿರೇಕೆರೂರು, ಹುಬ್ಬಳ್ಳಿ ಕಲಘಟಗಿ, ಶಗ್ಗಾವಿ, ಗದಗ, ಹಾವೇರಿ, ಕುಂದಗೋಳ, ಮುಂದರ್ಗಿ, ನವಲಗುಂದ್, ರಾಣಿಬೆನ್ನೂರ, ರೋಣ, ಸವಣೂರು ಮತ್ತು ಶಿರಹಟ್ಟಿ.

ಅಧ್ಯಕ್ಷರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

3) <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

ಕಾರ್ಯದರ್ಶಿಯವರು :- ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳು (ತಿದ್ದುಪಡಿ) ವಿಧೇಯಕ, 1997ನ್ನು ಸಭೆಯ ಮುಂದಿಡುತ್ತೇನೆ.

4) <u>ವರದಿಯನ್ನು ಒಪ್ಪುವುದು</u>

ಶ್ರೀ ಕೆ.ಎಸ್. ಬೀಳಗಿ (ಅಧ್ಯಕ್ಷರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ) ಮಾನ್ಯ ಅಧ್ಯಕ್ಷರೇ, 1997-98ನೇ ಸಾಲಿನ ರಾಜ್ಯದ ಸಾರ್ವಜನಿಕ ಉದ್ಯಮ : ಸಂಸ್ಥೆ ಮಂಡಳಿಗಳಲ್ಲಿ